






# ಗಾರ್ಗೋಟಿ

## ಕಲ್ಲರಳಿ ಹೂವಾಗಿ

**ಮರಾಠಿಯಲ್ಲಿ ಗಾರ್ಗೋಟಿ ಎಂದರೆ ಹರಳು ಕಲ್ಲು ಎಂದೇ ಅರ್ಥ. ಮಹಾರಾಷ್ಟ್ರದ ನಾಸಿಕ್ ದಿಂದ 25 ಕಿ.ಮೀ ದೂರದ ಸಿನ್ನರ್ ಕೈಗಾರಿಕಾ ಪ್ರದೇಶದಲ್ಲಿ ದೇಶದ ಮೊತ್ತಮೊದಲ ಈ ಖನಿಜ ಮತ್ತು ಕ್ರಿಸ್ಟಲ್‌ಗಳ ಸಂಗ್ರಹಾಲಯವಿದೆ.**

★ ಚಿತ್ರ- ಲೇಖನ: ಡಾ. ನಿರಂಜನ ವಾನಳ್ಳಿ

'ರತ್ನಗರ್ಭಾ ವಸುಂಧರಾ' ಎಂಬ ಮಾತು ಈ ಭೂಮಿಗೆ, ಅದರಲ್ಲೂ ಭರತ ಖಂಡಕ್ಕೆ ಸೂಕ್ತವಾಗಿ ಒಪ್ಪುತ್ತದೆ ಎಂಬುದಕ್ಕೆ ಸಾಕ್ಷಿ ಬೇಕಾದರೆ ಗಾರ್ಗೋಟಿಯ 'ಮಿನರಲ್ ಮ್ಯೂಸಿಯಂ' ನೋಡಬೇಕು. ಭಾರತದ ಭೂಗರ್ಭದೊಳಗಿರುವ ಅಮೂಲ್ಯ ರತ್ನಗಳ, ವಜ್ರ ವೈಢೂರ್ಯಗಳ ಒಂದು ಝಲಕ್ ಇಲ್ಲಿ ಕಾಣಸಿಗುತ್ತದೆ. ಭಾರತದ ಜಿಯೋಲೈಟ್ ಖನಿಜಗಳು ಮತ್ತು ಸ್ಫಟಿಕಗಳ ಅಪೂರ್ವ ಭಂಡಾರ ಇದಾಗಿದೆ. ಜೀವವಿರದ ಕಲ್ಲುಗಳು ಕೋಟ್ಯಂತರ ವರ್ಷಗಳಿಂದ ಮಳೆ ಬಿಸಿಲಿಗೆ ಮೈಯೊಡ್ಡಿ ನಿಂತವು, ಲಾವಾರಸದೊಂದಿಗೆ ಹೊರಚಿಮ್ಮಿ ತಣ್ಣಗಾಗಿ ಒಮ್ಮೆ ಹೋಳಾಗಿ ಅದರೊಳಗೆ ತೆರೆದುಕೊಳ್ಳುವ ಸೌಂದರ್ಯ ಲೋಕ ಅನಿರ್ವಚನೀಯವಾದುದು.

ಮಹಾರಾಷ್ಟ್ರದ ನಾಸಿಕ್ ದಿಂದ 25 ಕಿಲೋಮೀಟರು ದೂರದಲ್ಲಿರುವ ಸಿನ್ನರ್



